# ಶರಪೋವ ಅಲ್ಲ, ಸಫರೋವ!

ವಾರಗಳ ಹಿಂದಷ್ಟೇ ಮುಗಿದ ಫ್ರೆಂಚ್ ಓಪನ್ ಟೆನಿಸ್ ಫೈನಲ್‌ನಲ್ಲಿ 20ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದು ಸೆರೆನಾ ವಿಲಿಯಮ್ಸ್ ಮತ್ತೆ ಮೆರೆದಿರಬಹುದು. ಆದರೆ ಆ ಫೈನಲ್‌ನಲ್ಲಿ ವಿಶ್ವವೇ ಅಚ್ಚರಿಯಿಂದ ಗಮನಿಸಿದ್ದು ಫೈನಲ್‌ನಲ್ಲಿ ಸೋತ ಲೂಸಿ ಸಫರೋವಾಳನ್ನು. ಈ ಸಲದ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಖಂಡಿತಾ ಸೆರೆನಾ ವಿಲಿಯಮ್ಸ್‌ನ ಪಾರುಪತ್ಯ ಮುಗಿಯುತ್ತದೆ ಎಂದು ಬೆಟ್ ಕಟ್ಟಿದವರ ಸಂಖ್ಯೆ ದೊಡ್ಡದಿತ್ತು. ಏಕೆಂದರೆ ಟೂರ್ನಿಯುದ್ದಕ್ಕೂ ಲೂಸಿ ಅಂತಹ ನಿರೀಕ್ಷೆಗಳನ್ನು ಹುಟ್ಟು ಹಾಕಿದ್ದಳು. ಫ್ರೆಂಚ್ ಓಪನ್‌ನ ಮೊದಲ ಸುತ್ತನ್ನು ಆಡುವಾಗ ಲೂಸಿ ವಿಶ್ವ ಟೆನಿಸ್ ರ್ಯಾಂಕಿಂಗ್‌ನಲ್ಲಿ ಹೊಂದಿದ್ದು 13ನೇ ಸೀಡ್. ಆದರೆ ಆ ಟೂರ್ನಿಯ ಆರಂಭಿಕ ಸುತ್ತುಗಳಲ್ಲಿ ಸಬೈನ್ ಲಿಸಿಕಿ, ಗಾರ್ಬೈನ್ ಮಗುರುಜಾ, ಇವಾನೊವಿಕ್ ಮುಂತಾದ ಗಟ್ಟಿಗಿತ್ತಿಯರನ್ನೆಲ್ಲ ಸೋಲಿಸಿದ ಲೂಸಿ, ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಆಟಗಾರ್ತಿ ಮರಿಯಾ ಶರಪೋವಾಳನ್ನೇ ಕೆಡವಿದಾಗ, ಸ್ವತಃ ಸೆರೆನಾ ಕೂಡಾ ಅಚ್ಚರಿಗೊಂಡಿದ್ದು ನಿಜ. ಫೈನಲ್‌ನಲ್ಲೂ ಲೂಸಿ ಎದುರಾಳಿಗೆ ಆತಂಕದ ಕ್ಷಣಗಳನ್ನೇ ಹುಟ್ಟು ಹಾಕಿದ್ದಳು. ಮೊದಲ ಸೆಟ್ ಸೆರೆನಾ ಗೆದ್ದ ಬಳಿಕ ತಿರುಗಿ ಬಿದ್ದ ಲೂಸಿ ಎರಡನೇ ಸೆಟ್‌ಅನ್ನು 7–6ರಿಂದ ಕಸಿದುಕೊಂಡಿದ್ದಳು. ಆಗ 'ಇನ್ನೇನು ಸೆರೆನಾ ಕಥೆ ಮುಗಿಯಿತು' ಎಂದುಕೊಂಡವರೇ ಜಾಸ್ತಿ. ಆದರೆ ಮೂರನೇ ಸೆಟ್ ಸೆರೆನಾ ಪಾಲಾಯಿತು. ಅಂದ ಹಾಗೆ ಲೂಸಿ ಈ ಟೂರ್ನಿ ಮುಗಿಯುವ ಹೊತ್ತಿಗೆ 13ನೇ ರ್ಯಾಂಕಿಂಗ್‌ನಿಂದ ವಿಶ್ವದ 7ನೇ ರಾಂಕಿಂಗ್‌ಗೆ ಜಿಗಿದಿದ್ದಳು!

ಕಳೆದ ವರ್ಷ ವಿಂಬಲ್ಡನ್‌ನಲ್ಲೇ ಟೆನಿಸ್‌ಪ್ರಿಯರು ಲೂಸಿಯ ಕುರಿತು ಹೊಸ ನಿರೀಕ್ಷೆಗಳನ್ನು ಬೆಳೆಸಿಕೊಂಡಿದ್ದರು. ವಿಂಬಲ್ಡನ್‌ನ ಸೆಮಿಫೈನಲ್‌ವರೆಗೆ ತಲುಪಿದ್ದ ಲೂಸಿ, ಅದ್ಯಾಕೋ ಆ ಬಳಿಕ ಸ್ವಲ್ಪ ಮಂಕಾದಳು. ಆದರೆ ಈಗ ಮತ್ತೆ ಚಿಗುರಿಕೊಂಡಿದ್ದಾಳೆ. ಫ್ರೆಂಚ್ ಓಪನ್‌ನ ಫೈನಲ್ ತಲುಪುವವರೆಗೆ ಒಂದೂ ಸೆಟ್‌ಅನ್ನು ಎದುರಾಳಿಗೆ ಬಿಟ್ಟುಕೊಡದ ಲೂಸಿಯ ಆಟದ ಕಾಠಿಣ್ಯ ಎಲ್ಲರ ಗಮನ ಸೆಳೆದಿತ್ತು. ಇದು ಈಕೆ ತಲುಪಿದ ಮೊದಲ ಗ್ರ್ಯಾನ್‌ಪ್ರಿ ಫೈನಲ್ ಕೂಡಾ. ಈವರೆಗೆ ಒಂದೂ ಗ್ರ್ಯಾನ್‌ಪ್ರಿ ಗೆಲ್ಲದ ಲೂಸಿ, ಈಗಾಗಲೆ 23 ಗ್ರ್ಯಾನ್‌ಪ್ರಿ ಫೈನಲ್‌ಗಳಿಗೆ ಪ್ರವೇಶಿಸಿ ಅದರಲ್ಲಿ 19ನ್ನು ಗೆದ್ದುಕೊಂಡಿದ್ದ ಸೆರೆನಾ ವಿರುದ್ಧ ಸೆಣಸಿದ್ದು ವೀರೋಚಿತವೇ ಆಗಿತ್ತು.

ಈ ಎಡಗೈ ಆಟಗಾರ್ತಿ, ಎರಡೂ ಕೈಗಳಿಂದ ಹಿಂಗೈ ಹೊಡೆತಗಳನ್ನು ನೀಡುವಾಕೆ. ಎಲ್ಲಕ್ಕಿಂತ ಮುಖ್ಯವಾಗಿ ಈಕೆಯ ಅತ್ಯುನ್ನತ ಟಾಪ್‌ಸ್ಪಿನ್ ಮುಂಗೈ ಹೊಡೆತಗಳು ಟೆನಿಸ್‌ಪ್ರಿಯರಿಗೆ 'ಕ್ಲೇ ಕೋರ್ಟ್ ಕಿಂಗ್' ಆಗಿದ್ದ ರಫಾ ನಾಡಾಲ್‌ನ ಹೊಡೆತಗಳನ್ನು ನೆನಪಿಸುತ್ತವೆ. 7ನೇ ರ್ಯಾಂಕ್‌ನಿಂದ ಈಗ ಮುಂದಕ್ಕೆ ಜಿಗಿಯುವ ಬಗ್ಗೆ ಸಂಶಯಗಳಿಲ್ಲ. 26ರ ಹರೆಯದ ಲೂಸಿ, ಮುಂದಿನ ಎರಡು ಸೀಸನ್‌ಗಳಲ್ಲಿ ಹಲವು ಅಚ್ಚರಿಗಳಿಗೆ ಕಾರಣವಾಗುವುದಂತೂ ಖಂಡಿತಾ. ಈಗಾಗಲೇ ಆರು ಡಬ್ಲ್ಯುಟಿಎ ಸಿಂಗಲ್ಸ್ ಮತ್ತು 6 ಡಬಲ್ಸ್ ಟೈಟಲ್‌ಗಳನ್ನು ಗೆದ್ದಿರುವ ಈ ಜೆಕ್ ಹುಡುಗಿ, ಮೊದಲ ಗ್ರ್ಯಾನ್‌ಪ್ರಿ ಗೆಲ್ಲುವುದನ್ನು ಅಭಿಮಾನಿಗಳು ಕಾದು ಕುಳಿತಿದ್ದಾರೆ.

ಲೂಸಿಯದ್ದು ಟೆನಿಸ್ಪ್ರಿಯ ಕುಟುಂಬವೇ. ಮೂರರ ಎಳವೆಯಲ್ಲೇ ಟೆನಿಸ್ ರಾಕೆಟ್ ಕೈಗೆತ್ತಿಕೊಂಡದ್ದು ಅಕ್ಕ ವೆರೊನಿಕಾಗೆ ಸಾಥ್ ನೀಡಲು! ಆಕೆಯ ತಂದೆ ಮಿಲಾನ್ ಕೂಡಾ ಟೆನಿಸ್ ಕೋಚ್ ಆಗಿದ್ದ. ತಂದೆಯ ಕೋಚಿಂಗ್‌ನಲ್ಲಿ ಚಿಗುರಿಕೊಂಡ ಲೂಸಿ ಜೆಕ್ ರಿಪಬ್ಲಿಕ್‌ನಲ್ಲಿ ಅತ್ಯುತ್ತಮ ಜೂನಿಯರ್ ಆಟಗಾರ್ತಿಯಾಗಿ ಬೆಳೆದು ನಿಂತಳು. ಐಟಿಎಫ್ ಜೂನಿಯರ್ ಟೂರ್ನಿಯಲ್ಲಿ ಆಡಲು ಶುರು ಮಾಡಿದ ಬಳಿಕ ದೇಶದ 'ಟಾಪ್ ಟೆನ್' ಆಟಗಾರ್ತಿಯಾದಳು. ಹೀಗಾಗಿಯೇ ಆಕೆಗೆ ಸರ್ಕಾರದಿಂದ ಫೆಲೋಶಿಪ್ ಸಿಕ್ಕಿತು. 'ಟೆನಿಸ್ ತುಂಬ ದುಬಾರಿ ಆಟ. ಸರ್ಕಾರದ ನೆರವು ಸಿಕ್ಕಿದ್ದು ಅಲ್ಲವಾದಲ್ಲಿ ನಾನು ಅಲ್ಲೇ ಉಳಿದುಬಿಡುತ್ತಿದ್ದೆ. ವಿಶ್ವ ರಾಂಕಿಂಗ್ ಕನಸೂ ಕಾಣಲು ಸಾಧ್ಯವಿರಲಿಲ್ಲ' ಎನ್ನುತ್ತಾಳೆ ಈಕೆ. ಈಗಂತೂ ಆಕೆ ಟೆನಿಸ್– ಬಿಸಿನೆಸ್ ಲೋಕದ ಹೊಸ ಕಣ್ಮಣಿಯಾಗಿದ್ದಾಳೆ. ನೈಕ್ ಕಂಪೆನಿಯೇ ಆಕೆಯ ಪ್ರಾಯೋಜಕತ್ವ ವಹಿಸಿಕೊಂಡಿದೆ. ಈಗಾಗಲೆ ಒಟ್ಟು 40 ಲಕ್ಷ ಡಾಲರ್ ಬಹುಮಾನ ಮೊತ್ತವನ್ನೂ ಗೆದ್ದಿದ್ದಾಳೆ.



ಕಳೆದ ಕೆಲವು ವರ್ಷಗಳಲ್ಲಿ ಟೆನಿಸ್ ಕೋರ್ಟ್‌ನಂತೆ ಹೊರಗೂ ಸುದ್ದಿ ಮಾಡಿದಾಕೆ ಈ ಲೂಸಿ. 15ನೇ ವಯಸ್ಸಿನಿಂದಲೇ ಕೂಡಿಕೆ ಮಾಡಿಕೊಂಡಿದ್ದ ಗೆಳೆಯ, ಪುರುಷರ ಟೆನಿಸ್‌ನ ವಿಶ್ವದ ನಂ.10 ಆಟಗಾರ ಥಾಮಸ್ ಬೆರ್ಡಿಕ್ ಜತೆಗಿನ ಆಕೆಯ ಪ್ರೇಮ 2011ರಲ್ಲಿ ಮುರಿದುಬಿತ್ತು. 'ಮೊದಲ ಪ್ರೇಮವನ್ನು ಕಡಿದುಕೊಳ್ಳಲು ಬಹಳ ಕಷ್ಟವಾಯಿತು. ಆದರೆ ಇಬ್ಬರ ದಾರಿಯೂ ಬೇರೆ ಬೇರೆ ಎಂದು ತೀವ್ರವಾಗಿ ಇಬ್ಬರಿಗೂ ಅನ್ನಿಸಿದ್ದರಿಂದ ಬೇರ್ಪಡದೆ ಬೇರೆ ದಾರಿ ಇರಲಿಲ್ಲ' ಎಂದಳಾಕೆ. ಮೃದು ವ್ಯಕ್ತಿತ್ವದ ಲೂಸಿ ಹೆಚ್ಚು ಪ್ರಚಾರ ಬಯಸುವವಳಲ್ಲವಾದರೂ ಈ ಘಟನೆ ಅಗತ್ಯಕ್ಕಿಂತ ಹೆಚ್ಚು ಪ್ರಚಾರ ನೀಡಿದ್ದು ಸುಳ್ಳಲ್ಲ. 'ಆದರೆ ಇದರಿಂದ ನನ್ನ ಆಟದ ಕಡೆಗೆ ಹೆಚ್ಚು ಗಮನ ಕೇಂದ್ರೀಕರಿಸಲು ಸಾಧ್ಯವಾದದ್ದಂತೂ ನಿಜ' ಎನ್ನುವುದು ಆಕೆಯ ಮಾತು. ಸದ್ಯಕ್ಕೆ ಕೋಚ್ ಟ್ರಾಯ್ ಹಾನ್ ಜತೆ ಈಕೆ ಎರಡನೇ ಸಂಬಂಧ ರೂಪಿಸಿಕೊಂಡಿದ್ದಾಳೆ. ವೈಯಕ್ತಿಕ ವಿಷಯಗಳು ಏನೇ ಇದ್ದರೂ, ಸೆರೆನಾ ವಿಲಿಯಮ್ಸ್, ಮರಿಯಾ ಶರಪೋವ ಮುಂತಾದವರು ನಿರ್ಗಮನದ ಅಂಚಿನಲ್ಲಿರುವ ವಿಶ್ವ ಟೆನಿಸ್‌ನಲ್ಲಿ ಲೂಸಿಗೆ ರ್ಯಾಂಕಿಂಗ್ ಪಟ್ಟಿಯಲ್ಲಿ ಮೇಲೇರಲು ಅದ್ಭುತ ಅವಕಾಶಗಳಿವೆ ಎನ್ನುವುದಂತೂ ನಿಜ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65